ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗದವರಿಗಾಗಿ ಹಾಗೂ ನಿಮ್ನ ವರ್ಗದವರಿಗಾಗಿ ಇರುವ ವಿದ್ಯಾರ್ಥಿ ನಿಲಯಗಳ ಬಗ್ಗೆ.

೨೧೩. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗದವರಿಗಾಗಿ ಹಾಗೂ ನಿಮ್ನ ವರ್ಗದವರಿಗಾಗಿ ಎಲ್ಲೆಲ್ಲಿ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ ? (ಪಟ್ಟಿ ನೀಡುವುದು).

ಆ) ಪ್ರತಿ ವಿದ್ಯಾರ್ಥಿ ನಿಲಯದಲ್ಲಿ ಈ ವರ್ಷಕ್ಕೆ ಎಷ್ಟು ವಿದ್ಯಾರ್ಥಿಗಳು ಸೇರಿದ್ದಾರೆ ?

ಇ) ಪ್ರತಿ ವಿದ್ಯಾರ್ಥಿಗಾಗಿ ಸರ್ಕಾರದವರು ತಿಂಗಳಿಗೆ ಎಷ್ಟು ರೂಪಾಯಿ ಖರ್ಚು ಮಾಡುತ್ತಾರೆ ?

ಈ) ಎಷ್ಟು ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರಿ ಕಟ್ಟಡವಿದೆ ಹಾಗೂ ಎಲ್ಲೆಲ್ಲಿ ?

ಉ) ಕಟ್ಟಡವಿಲ್ಲದ ವಿದ್ಯಾರ್ಥಿ ನಿಲಯಗಳಿಗೆ ಕಟ್ಟಡ ಒದಗಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಜೆ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು. (೧) ಸರ್ಕಾರಿ ವಿದ್ಯಾರ್ಥಿ ನಿಲಯಗಳು

೧) ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯ	೩೩
೨) ಮೆಟ್ರಿಕ್-ನಂತರ ವಿದ್ಯಾರ್ಥಿ ನಿಲಯ	೩
ಒಟ್ಟು.....	೩೬

(೨) ಅನುದಾನಿತ ವಿದ್ಯಾರ್ಥಿ ನಿಲಯಗಳು.-ಒಂದು (ವಿವರಣಾ ಪಟ್ಟಿ ಲಗತ್ತಿಸಿದೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿದ್ಯಾರ್ಥಿ ನಿಲಯಗಳು (ಸರ್ಕಾರಿ) ೨೧ ವಿದ್ಯಾರ್ಥಿ ನಿಲಯಗಳು (ವಿವರಣಾ ಪಟ್ಟಿ ಲಗತ್ತಿಸಿದೆ)

ಆ) ವಿವರಣಾ ಪಟ್ಟಿಯಲ್ಲಿ ವಿವರಿಸಲಾಗಿದೆ.

ಇ) ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು-

ಅ) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ವಿದ್ಯಾರ್ಥಿಗಳಿಗೆ ರೂ. ೧೦೫-೦೦ ಅಲ್ಲದೆ ಪಠ್ಯ ಪುಸ್ತಕ ಲೇಖನ ಸಾಮಗ್ರಿ ೨ ಜೊತೆ ಸಮವಸ್ತ್ರ ಕ್ಷೌರ ವೆಚ್ಚ, ವೈದ್ಯಕೀಯ ಸೌಲಭ್ಯ ಹಾಗೂ ಮೂರು ವರ್ಷಕ್ಕೊಮ್ಮೆ ಹಾಸಿಗೆ ಹೊದಿಕೆ, ವೃತ್ತ ಪತ್ರಿಕೆ. ಅಲ್ಪ ಕಾಲಿಕ ಬೊದನೆ ವ್ಯವಸ್ಥೆ ಮಾಡಲಾಗಿದೆ.

ಆ) ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ ವಿದ್ಯಾರ್ಥಿಗಳಿಗೆ ರೂ. ೧೨೫-೦೦ ಖರ್ಚು ಮಾಡಲಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳು.—

ಅ) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ವಿದ್ಯಾರ್ಥಿಗಳಿಗೆ ಹೀಗಿದೆ.—
ಊಟದ ವೆಚ್ಚ ರೂ. ೧೦೦-೦೦ ಪ್ರತಿ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ
ಇತರ ಖರ್ಚು ರೂ. ೫-೦೦ ಪ್ರತಿ ವಿದ್ಯಾರ್ಥಿಗೆ ಒಂದು ತಿಂಗಳಿಗೆ.

ಆ) ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯ ವಿದ್ಯಾರ್ಥಿಗಳಿಗೆ ರೂ ೧೫೦-೦೦ ಖರ್ಚು ಮಾಡಲಾಗುತ್ತಿದೆ.

ಈ) (೧) ಹಿಂದುಳಿದ ವರ್ಗ ವಿದ್ಯಾರ್ಥಿ ನಿಲಯ, ಜೋಯಿಡಾ ಇದು ಸರ್ಕಾರಿ ಕಟ್ಟಡದಲ್ಲಿದೆ.

(೨) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ೯ ವಿದ್ಯಾರ್ಥಿನಿಲಯಗಳು ಸರ್ಕಾರಿ ಕಟ್ಟಡಗಳಲ್ಲಿದೆ.

೧) ಸರ್ಕಾರಿ ವಿದ್ಯಾರ್ಥಿ ನಿಲಯ ಹಲಿಯಾಳ
೨) ಸರ್ಕಾರಿ ವಿದ್ಯಾರ್ಥಿ ನಿಲಯ ಡಾಂಡೇಲಿ
೩) ಸರ್ಕಾರಿ ವಿದ್ಯಾರ್ಥಿ ನಿಲಯ ಕಾರವಾರ
೪) ಸರ್ಕಾರಿ ವಿದ್ಯಾರ್ಥಿ ನಿಲಯ ಕಂಸುಟಾ
೫) ಸರ್ಕಾರಿ ವಿದ್ಯಾರ್ಥಿ ನಿಲಯ ಮುಂಡಗೋಡ
೬) ಸರ್ಕಾರಿ ವಿದ್ಯಾರ್ಥಿ ನಿಲಯ ಸಿರಸಿ
೭) ಸರ್ಕಾರಿ ವಿದ್ಯಾರ್ಥಿ ನಿಲಯ ಅಂಕೋಲ ಟೌನ್
೮) ಸರ್ಕಾರಿ ವಿದ್ಯಾರ್ಥಿ ನಿಲಯ ಕಾರವಾರ
೯) ಸರ್ಕಾರಿ ವಿದ್ಯಾರ್ಥಿ ನಿಲಯ ಸಿರಸಿ

ಉ) ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು.

ಹಂತ ಹಂತವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ ಜಿಲ್ಲಾ ಉಪಯೋಜನೆ ಹಾಗೂ ಯೋಜನೆಯಲ್ಲಿ ಒದಗಿಸಿರುವ ಹಣಕಾಸಿನ ಅವಕಾಶದ ಮೇಲೆ ಕಟ್ಟಡಗಳ ನಿರ್ಮಾಣದ ಕೆಲಸವನ್ನು ಕೆಗೆದುಕೊಳ್ಳಲಾಗುತ್ತಿದೆ. ಸದ್ಯಕ್ಕೆ ೬ ಕಟ್ಟಡಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಹಂತದಲ್ಲಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು.—

ಆರು ಕಟ್ಟಡಗಳು ಕಟ್ಟಲಾಗುತ್ತಿದೆ. ಇನ್ನೂ ಉಳಿದ ಸ್ಥಳಗಳಲ್ಲಿ ಕಟ್ಟಡಗಳನ್ನು ಹಂತ ಹಂತವಾಗಿ ಕೆಗೆದುಕೊಳ್ಳಲಾಗುವುದು.

ವಿವರಣಾ ಪಟ್ಟಿ -- ೧

ಉತ್ತರ ಕನ್ನಡ ಜಿಲ್ಲೆಯಲ್ಲಿ ವಿದ್ಯಾರ್ಥಿ ನಿಲಯಗಳು ಇರುವ ಸ್ಥಳಗಳನ್ನು ತೋರಿಸುವ ಪಟ್ಟಿ

ಕ್ರಮ ಸಂಖ್ಯೆ	ವಿದ್ಯಾರ್ಥಿ ನಿಲಯದ ಹೆಸರು ಹಾಗೂ ಇರುವ ಸ್ಥಳ	ಗುಂಪು	ಮಂಜೂರಾತಿ ಸಂಖ್ಯೆ	೧೯೮೬-೮೭ನೇ ಸಾಲಿನಲ್ಲಿ ಪ್ರವೇಶ ಪಡೆದವರ ಸಂಖ್ಯೆ
	೧. ಸರ್ಕಾರಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳು			
೧	ಕಾರವಾರ	ಬಾಲಕರು	೫೦	೪೬
೨	ಅಂಕೋಲಾ	,,	೫೦	೪೦
೩	ಭಟ್ಕಳ	,,	೫೦	೫೦
೪	ಹಳಿಯಾಳ	,,	೫೦	೪೫
೫	ಕಾಗಲ	,,	೫೦	೫೦
೬	ಮುಂಡಗೋಡ	,,	೫೦	೫೦
೭	ಸಿದ್ದಾಪುರ	,,	೫೦	೫೦
೮	ಸಿರ್ಸಿ	,,	೫೦	೪೭
೯	ಜೊಯಿಡಾ	ಬಾಲಕಿಯರು	೫೦	೫೦
೧೦	ಯಲ್ಲಾಪುರ	ಬಾಲಕರು	೫೦	೪೨
೧೧	ಬೆಳೆಸೆ	,,	೫೦	೪೬
೧೨	ಖಿರ್ವಾ	,,	೫೦	೩೫
೧೩	ಕಾರವಾರ	ಬಾಲಕಿಯರು	೫೦	೩೫
೧೪	ಕಿರವತ್ತಿ	ಬಾಲಕರು	೫೦	೫೦
೧೫	ಮುರಕವಾಡ	,,	೫೦	೫೦
೧೬	ಸಿದ್ಧಾಪುರ ಪಟ್ಟಣ	ಬಾಲಕಿಯರು	೫೦	೫೦
೧೭	ಮುರುಂಡೇಶ್ವರ	ಬಾಲಕರು	೨೫	೨೫
೧೮	ದಾಸನಕೊಪ್ಪ	,,	೨೫	೨೫
೧೯	ಬಂಕಿಕೊಡ್ಲ	,,	೨೫	೨೫
೨೦	ಬನವಾಸಿ	,,	೨೫	೨೧
೨೧	ಕಂದಸೂರ	,,	೨೫	೨೫
೨೨	ಶೆಟಗೇರಿ	,,	೨೫	೨೫
೨೩	ಕವಚೂರು	,,	೨೫	೨೪
೨೪	ಚೆಂಡಿಯಾ	,,	೨೫	೨೨
೨೫	ಉಳವಿ	,,	೨೫	೨೫
೨೬	ವಜ್ರಳ್ಳಿ	,,	೨೫	೨೫
೨೭	ಮಳಗಿ	,,	೨೫	೨೫
೨೮	ಕಡತೋಕ	,,	೨೫	೨೫
೨೯	ಸಿದ್ದಾರ್	,,	೨೫	೨೫
೩೦	ಮುಂಡಗೋಡ (ಡಿ.ಟಿ.)	,,	೨೫	೨೫

೧	೨	೩	೪	೫
ಮೆಟ್ರಿಕ್—ಪೂರ್ವ ವಿದ್ಯಾರ್ಥಿ ನಿಲಯಗಳ ಮುಂದುವರಿಕೆ.....				
೩೧	ಹೊನ್ನಾವರ	ಇತರ ಹಿಂದುಳಿದ ವರ್ಗಗಳ	ಬಾಲಕರು	೩೦
೩೨	ಅಂಕೋಲಾ		ಬಾಲಕಿಯರು	೨೫
೩೩	ಜೋಯಿಡಾ		ಬಾಲಕರು	೫೦
	೨. ಮೆಟ್ರಿಕ್—ನಂತರದ ವಿದ್ಯಾರ್ಥಿ ನಿಲಯಗಳು.—			
೧	ಕಾರವಾರ	ಬಾಲಕರ	೧೦೦	೪೦
೨	ಕಾರವಾರ	ಬಾಲಕಿಯರ	೫೦	೩೭
೩	ಕುಮಟಾ	ಬಾಲಕಿಯರ	೨೫	೨೫
	೩. ಸಹಾಯಧನ ಪಡೆಯುವ ವಿದ್ಯಾರ್ಥಿನಿಲಯಗಳು.—			
೧	ಮೂಕಪ್ಪ ಸ್ವಾಮಿ ಗವಿಮಠ ವಿದ್ಯಾರ್ಥಿ ಪ್ರಸಾದ ನಿಲಯ, ಪಾಳ, ಮುಂಡಗೋಡ ತಾಲ್ಲೂಕು.			೪೦

ವಿವರಣಾ ಪಟ್ಟಿ -- ೨

	ಉತ್ತರ ಕನ್ನಡ ಜಿಲ್ಲೆ	ಮಂಜೂರಾತಿ ಸಂಖ್ಯೆ	ಪ್ರವೇಶ ಪಡೆದವರ ಸಂಖ್ಯೆ
೧	ಸರ್ಕಾರಿ ಬಾಲಕರ ವಿದ್ಯಾರ್ಥಿನಿಲಯ ಅಂಕೋಲಾ (ತಾಲ್ಲೂಕು)	೫೦	೩೭
೨	-,,- ಹಳಿಯಾಳ	೪೦	೩೮
೩	-,,- ವಜ್ರಹಳ್ಳಿ ಎಲ್ಲಾಪುರ ತಾಲ್ಲೂಕು ನಿಂದ ದಾಂಡೇಲಿ ಹಳಿಯಾಳ ತಾಲ್ಲೂಕಿಗೆ ವರ್ಗಾವಣೆ ಮಾಡಿದೆ.	೫೦	೨೩
೪	-,,- ಹೊನ್ನಾವರ ಟೌನ್‌ನಿಂದ ಹಳದಿಪುರ ಹೊನ್ನಾವರ ತಾಲ್ಲೂಕಿಗೆ ವರ್ಗಾವಣೆ ಮಾಡಿದೆ.	೫೦	೧೬
೫	-,,- ಕಾರವಾರ ತಾಲ್ಲೂಕ್	೫೩	೫೦
೬	-,,- ಕುಮಟ ತಾಲ್ಲೂಕ್	೭೫	೨೬
೭	-,,- ಮುಂಡಗೋಡ ತಾಲ್ಲೂಕ್	೨೫	೭೫
೮	-,,- ಇಂದೂರ್ ಮುಂಡಗೋಡ್ ತಾಲ್ಲೂಕ್	೫೦	೫೦
೯	-,,- ಸಿದ್ದಾಪುರ ತಾಲ್ಲೂಕ್	೫೦	೫೦
೧೦	-,,- ಸಿರ್ಸಿ ತಾಲ್ಲೂಕ್	೪೭	೨೪
೧೧	-.,- ಸೂಪಾದಿಂದ ರಾವಂಗನರ ಸೂಪಾ ತಾಲ್ಲೂಕಿಗೆ ವರ್ಗವಣೆ ಮಾಡಿದೆ	೫೦	೪೧
೧೨	-,,- ಎಲ್ಲಾಪುರ ತಾಲ್ಲೂಕ್	೨೫	೨೫
೧೩	ಸರ್ಕಾರಿ ಬಾಲಕಿಯರ ವಿದ್ಯಾರ್ಥಿ ನಿಲಯ ಅಂಕೋಲಾ ಟೌನ್ ಅಂಕೋಲ (ತಾಲ್ಲೂಕ್)	೫೦	೩೭
೧೪	-,,- ಬಟ್ಕಲ್ ತಾಲ್ಲೂಕ್	೨೫	೨೦
೧೫	-,,- ಹಳಿಯಾಳ್ -,,-	೨೫	೨೦
೧೬	-,,- ಹೊನ್ನಾವರ್ -,,-	೨೫	೧೬
೧೭	-,,- ಕಾರವಾರ -,,-	೫೦	೨೧
೧೮	-,,- ಕುಮಟಾ -,,-	೩೫	೧೦
೧೯	-,,- ಮುಂಡಗೋಡ -,,-	೫೦	೪೬
೨೦	-,,- ಸಿದ್ದಾಪುರ -,,-	೫೦	೪೫
೨೧	-,,- ಸಿರ್ಸಿ -,,-	೨೭	೨೭
		೯೦೨	೬೪೭

ಬಾಲಕರ ವಿದ್ಯಾರ್ಥಿ ನಿಲಯ. ೧೨ ಬಾಲಕರು ೫೬೫

ಬಾಲಕಿಯರ ವಿದ್ಯಾರ್ಥಿ ನಿಲಯ. ೯ ಬಾಲಕಿಯರು ೩೩೭